**ಕರ್ನಾಟಕ ಸರ್ಕಾರ**
ಕರ್ನಾಟಕ ವಿಧಾನ ಪರಿಷತ್ತು
150ನೇ ಅಧಿವೇಶನ-2023

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 418(520) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ವೈ.ಎಂ.ಸತೀಶ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಹಾಗೂ ಪರಿಸರ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 10.07.2023 |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ವಿಜಯನಗರ ಜಿಲ್ಲೆ, ಕೊಟ್ಟೂರು ತಾಲ್ಲೂಕು, ರಾಂಪುರ ಗ್ರಾಮದಲ್ಲಿ ಬ್ಲಾಸಂ ಶವರ್ಸ್ ಆಗ್ರೋ ಸೀಡ್ಸ್ ಕಂಪನಿ ಇರುವುದು ನಿಜವೇ; ಈ ಕಂಪನಿಯ ವಹಿವಾಟು ಏನು; ಯಾವ ವರ್ಷ ಈ ಕಂಪನಿ ಪ್ರಾರಂಭವಾಯಿತು; (ಮಾಹಿತಿ ನೀಡುವುದು) | ಹೌದು<br><br>ಮಿಡಿ ಸೌತೆಕಾಯಿ ಹಾಗೂ ತರಕಾರಿಗಳ ಸಂಸ್ಕರಣೆ ನಡೆಸುವ, 2000 TPA ಸಾಮರ್ಥ್ಯದ ಬ್ಲಾಸಂ ಶವರ್ಸ್ ಅಗ್ರೋ ಸೀಡ್ಸ್ ಕಂಪನಿಯನ್ನು ಸ ನಂ:424/ಎ1, 433/ಬಿ2, ರಾಂಪೂರ ಗ್ರಾಮ, ಹಂಪಿ-ಕಮಲಾಪುರ-ಹಗರಿಬೊಮ್ಮನಹಳ್ಳಿ ರಸ್ತೆ, ಕೊಟ್ಟೂರು ತಾಲೂಕು, ವಿಜಯನಗರ ಜಿಲ್ಲೆ, ಇಲ್ಲಿ ಸ್ಥಾಪಿಸಲು ದಿನಾಂಕ: 05.11.2018 ರಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸಮ್ಮತಿ ಪತ್ರವನ್ನು ನೀಡಲಾಗಿದ್ದು, ಸದರಿ ಕೈಗಾರಿಕೆಯನ್ನು ಕಾರ್ಯಾಚರಣೆಗೊಳಸಲು ದಿನಾಂಕ:11.01.2022 ರಂದು ಮಂಡಳಿಯಿಂದ ಸಮ್ಮತಿ ಪತ್ರವನ್ನು ಮಂಜೂರು ಮಾಡಲಾಗಿದೆ. |
| (ಆ) | ಈ ರಾಂಪುರ ಗ್ರಾಮದಲ್ಲಿ ಬ್ಲಾಸಂ ಶವರ್ಸ್ ಆಗ್ರೋ ಸೀಡ್ಸ್ ಕಂಪನಿಯ ಕಾರ್ಖಾನೆಯಿಂದ ಸುತ್ತಮುತ್ತಲಿನ ಸುಮಾರು 5 ಕಿ.ಮೀ. ವ್ಯಾಪ್ತಿಯ ಗ್ರಾಮದ ರೈತರ ಬೆಳೆಗಳಿಗೆ, ಪರಿಸರಕ್ಕೆ ಹಾಗೂ ಅಂತರ್ಜಲ ಕಲುಷಿತಗೊಂಡು ಹಾನಿಯಾಗುತ್ತಿರುವ ಬಗ್ಗೆ ಜಿಲ್ಲಾಧಿಕಾರಿಗಳ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಗಮನಕ್ಕೆ | • ಜಲ ಮಾಲಿನ್ಯಕ್ಕೆ ಸಂಬಂಧಿಸಿದಂತೆ ಬ್ಲಾಸಂ ಶವರ್ಸ್ ಅಗ್ರೋ ಸೀಡ್ಸ್ ಕಂಪನಿ ವಿರುದ್ಧ ರೈತರಿಂದ ಹಾಗೂ ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ದೂರುಗಳು ಸ್ವೀಕೃತವಾಗಿರುತ್ತವೆ.<br>• ಈ ದೂರುಗಳ ಅನ್ವಯ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಕಛೇರಿಯಿಂದ ದಿನಾಂಕ: 23.08.2022 ಹಾಗೂ 28.10.2022 |

| | | |
|---|---|---|
| | ಬಂದಿರುವುದು ನಿಜವೇ: ಇದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು: (ವಿವರ ನೀಡುವುದು) | ರಂದು ನಡೆಸಲಾದ ಸ್ಥಳ ಪರಿವೀಕ್ಷಣೆಯಲ್ಲಿ ಪರಿಸರ ಮಾನಕಗಳ ಉಲ್ಲಂಘನೆಗಳು ಕಂಡು ಬಂದಿರುತ್ತವೆ.<br>• ಈಗಾಗಲೇ ಸದರಿ ಕಂಪನಿಯ ಮೇಲೆ ಕ್ರಮ ಜರುಗಿಸಲಾಗಿದೆ. ಪರಿವೀಕ್ಷಣೆಯಲ್ಲಿ ಕಂಡುಬಂದ ಉಲ್ಲಂಘನೆಗಳಿಗೆ ಮಂಡಳಿಯ ಬಳ್ಳಾರಿ ವಲಯ ಕಛೇರಿಯಿಂದ ಕೈಗಾರಿಕೆಯನ್ನು ಮುಚ್ಚುವ ಕುರಿತು ಉದ್ದೇಶಿತ ನಿರ್ದೇಶನವನ್ನೊಳಗೊಂಡ ನೋಟಿಸ್ (Notice of Proposed Direction) ಅನ್ನು THE WATER (PREVENTION AND CONTROL OF POLLUTION) ACT. 1974 ರ ಪ್ರಕರಣ 33(ಎ)ರಡಿ ದಿನಾಂಕ:03.09.2022ರಂದು ಹೊರಡಿಸಲಾಗಿದೆ.<br>• ದಿನಾಂಕ:23.05.2023 ರಂದು ಪ್ರಾದೇಶಿಕ ಕಛೇರಿಯ ಅಧಿಕಾರಿಗಳು ನಡೆಸಿದ ಪರಿವೀಕ್ಷಣೆಯ ಸಮಯದಲ್ಲಿ ಸದರಿ ಕೈಗಾರಿಕೆ ಕಾರ್ಯಾಚರಣೆಯಲ್ಲಿ ಇರುವುದಿಲ್ಲ. ಆದರೆ, ಶುದ್ಧೀಕರಿಸಿದ ನೀರನ್ನು ಶೇಖರಿಸಲು ಪ್ರತ್ಯೇಕ 3 ಲಕ್ಷ ಲೀಟರ್ ಕಾಂಕ್ರೀಟ್ ಕಲೆಕ್ಷನ್ ಟ್ಯಾಂಕ್(ಸಂಪ್) ನಿರ್ಮಿಸಿರುವುದು ಕಂಡುಬಂದಿರುತ್ತದೆ. ದಿನಾಂಕ: 02.07.2023 ರಂದು ಪುನ: ನಡೆಸಲಾದ ಪರಿವೀಕ್ಷಣೆ ಸಮಯದಲ್ಲಿ ಕಾರ್ಯಾಚರಣೆಯಲ್ಲಿದ್ದ ಸದರಿ ಕೈಗಾರಿಕೆಯಿಂದ ತ್ಯಾಜ್ಯ ನೀರು ಸಂಸ್ಕರಣೆ ಘಟಕವು ಚಾಲನೆಯಲ್ಲಿರುತ್ತದೆ. ಆದರೆ, ಸಂಸ್ಕರಿಸಿದ/ಸಂಸ್ಕರಿಸದ ತ್ಯಾಜ್ಯ ನೀರನ್ನು ಕೈಗಾರಿಕೆಯಿಂದ ಹೊರಗಡೆಗೆ ವಿಸರ್ಜಿಸುತ್ತಿರುವುದು ಕಂಡು ಬಂದಿರುವುದಿಲ್ಲ.<br>• ಪೂರ್ವಪ್ರಸ್ತಾಪಿತ ಪರಿವೀಕ್ಷಣೆಯಲ್ಲಿ ದೂರುದಾರರ ಸಮಕ್ಷಮದಲ್ಲಿ ಕೊಳವೆ ಬಾವಿಯ ನೀರನ್ನು ಹಾಗೂ ಕೈಗಾರಿಕೆ ಕೊಳವೆ ಬಾವಿ ನೀರನ್ನು ಸಂಗ್ರಹಿಸಿ ಪರೀಕ್ಷಿಸಿದಾಗ ನೀರಿನ ಮಾಲಿನ್ಯ ಮಾನಕ/ಸೂಚ್ಯಾಂಕಗಳ ನಿಗದಿತ ಪರಿಮಿತಿಯಲ್ಲಿರುವುದು ಪತ್ತೆಯಾಗಿರುತ್ತದೆ. ಇದರಿಂದಾಗಿ ಅಂತರ್ಜಲವು ಕಲುಷಿತವಾಗದೇ ಇರುವುದು ದೃಢವಾಗಿರುತ್ತದೆ. |
| (ಇ) | ಕೌದ್ರಾದಲ್ಲಿ, ಈ ರಾಂಪುರ ಗ್ರಾಮದ [illegible] ಶವರ್ಸ್ ಆಗ್ರೋ ಸೀಡ್ಸ್ ಕಂಪನಿಯ ಕಾರ್ಖಾನೆಯಿಂದ ಸುತ್ತಮುತ್ತಲಿನ ಗ್ರಾಮದ ಹಾಗೂ ರೈತರ ಬೆಳೆಗಳಿಗೆ. ಹಾನಿಯಾಗುತ್ತಿರುವ ಬಗ್ಗೆ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಗಮನಕ್ಕೆ ಬಂದಿದ್ದರೂ ಸಹ ಇಲ್ಲಿಯವರೆಗೆ ಕ್ರಮ ವಹಿಸದಿರುವುದಕ್ಕೆ ಕಾರಣಗಳೇನು: ಕ್ರಮ ವಹಿಸಿದ್ದಲ್ಲಿ. ಏನು ಕ್ರಮ ತೆಗೆದುಕೊಳ್ಳಲಾಗಿದೆ: (ವಿವರ ನೀಡುವುದು) | |

| | | |
|---|---|---|
| | | • ಮಂಡಳಿಯಿಂದ ಕಾಲಕಾಲಕ್ಕೆ ಮೇಲ್ವಿಚಾರಣೆ ನಡೆಸಲಾಗುತ್ತಿದೆ. ಮಂಡಳಿಯಿಂದ ಸಂಗ್ರಹಿಸಲಾದ ನೀರಿನ ಮಾದರಿಗಳನ್ನು ವಿಶ್ಲೇಷಣೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದ್ದು. ಪ್ರಯೋಗಾಲಯದಿಂದ ವರದಿ ಸ್ವೀಕೃತವಾದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು. |
| **(ಈ)** | ಈ ಸೀಡ್ಸ್ ಕಂಪನಿಯಿಂದ ಇಲ್ಲಿಯವರೆಗೆ ಆಗಿರುವ ಹಾನಿಯನ್ನು ಸರಿಪಡಿಸಲು ಇರುವ ನಿವಾರಣೋಪಾಯಗಳೇನು: ಇದಕ್ಕೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ಮಾಹಿತಿ ನೀಡುವುದು) | ಉದ್ದೇಶಿತ ಮುಚ್ಚುವ ನಿರ್ದೇಶನವನ್ನೊಳಗೊಂಡ ನೋಟಿಸ್ (Notice of Proposed Direction) ಅನ್ನು ನೀಡಿದ ನಂತರ, ಸದರಿ ಸಂಸ್ಥೆಯು. ಸಂಸ್ಕರಿಸಿದ ನೀರನ್ನು ಸಂಗ್ರಹಿಸಲು 3 ಲಕ್ಷ ಲೀಟರ್ ನೀರು ಸಾಮರ್ಥ್ಯದ ಕಾಂಕ್ರೀಟ್ ಕಲೆಕ್ಷನ್ ಟ್ಯಾಂಕ್ ಅನ್ನು ನಿರ್ಮಿಸಿರುತ್ತದೆ. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸಮ್ಮತಿ ಪತ್ರದ ಷರತ್ತಿನಂತೆ ಯಾವುದೇ ಕಲುಷಿತ ನೀರು ಕೈಗಾರಿಕೆಯ ಆವರಣದಿಂದ ಹೊರಹೋಗದಂತೆ ಕ್ರಮ ಕೈಗೊಳ್ಳಲಾಗುವುದು.<br><br>ಮುಂದಿನ ದಿನಗಳಲ್ಲಿ ಕೈಗಾರಿಕೆಯಿಂದ ಮಾಲಿನ್ಯವಾಗುತ್ತಿರುವುದು ಕಂಡುಬಂದಲ್ಲಿ ಮಂಡಳಿಯಿಂದ ಸೂಕ್ತ ಕ್ರಮ ಜರುಗಿಸಲಾಗುವುದು |

**ಸಂಖ್ಯೆ: ಎಫ್‌ಇಇ/ 150 /ಇಪಿಸಿ /2023**

(ಈಶ್ವರ್ ಬಿ ಖಂಡ್ರೆ)

ಅರಣ್ಯ, ಜೀವಿಪರಿಸ್ಥಿತಿ ಹಾಗೂ ಪರಿಸರ ಸಚಿವರು.